ಮಂಗಳೂರು ವಿಶ್ವವಿದ್ಯಾನಿಲಯ

ದಿನಾಂಕ 06.09.2022ರಂದು ಅಪರಾಹ್ನ ಗಂಟೆ 12.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ಆನ್‌ಲೈನ್‌ಮೂಲಕ ನಡೆದ ಶೈಕ್ಷಣಿಕ ಮಂಡಳಿಯ 2022–23ನೇ ಸಾಲಿನ ಪ್ರಥಮ ವಿಶೇಷ ಸಭೆಯ ನಡವಳಿಗಳು.

ಉಪಸ್ಥಿತರು

ಅನುಪಸ್ಥಿತರು

<u>ಪ್ರಾರಂಭಿಕ</u>

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಎಲ್ಲಾ ಸದಸ್ಯರುಗಳು, ವಿಶೇಷ ಆಹ್ವಾನಿತರನ್ನು ಸಭೆಗೆ ಸ್ವಾಗತಿಸಿದರು.

➢ **ಸಂತಾಪ ಸೂಚಕ ನಿರ್ಣಯ:**

ಮಂಗಳೂರು ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳಾಗಿಅಧಿಕಾರ ನಿರ್ವಹಿಸಿದ್ದ ಪ್ರೊ.ಬಿ.ಶೇಖ್ ಆಲಿ ಇವರು ದಿನಾಂಕ 01.09.2022ರಂದು ದೈವಾಧೀನರಾಗಿರುತ್ತಾರೆ. ಸದರಿಯವರು ದಿನಾಂಕ 10.09.1980 ರಿಂದ 14.03.1985ರವರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಅವಧಿಯಲ್ಲಿ ಸಿಂಡಿಕೇಟು, ಶೈಕ್ಷಣಿಕ ಮಂಡಳಿ ಹಾಗೂ ಇತರೆ ಪ್ರಾಧಿಕಾರಗಳ ಅಧ್ಯಕ್ಷರಾಗಿದ್ದು ವಿಶ್ವವಿದ್ಯಾನಿಲಯದ ಆಡಳಿತ ಮತ್ತು ಶೈಕ್ಷಣಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿರುತ್ತಾರೆ. ಇವರ ನಿಧನಕ್ಕೆ ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ಸಭೆಯು ಅತೀವ ಸಂತಾಪವನ್ನು ವ್ಯಕ್ತಪಡಿಸಿ, ಎರಡು ನಿಮಿಷಗಳ ಮೌನ ಪ್ರಾರ್ಥನೆಯನ್ನು ಸಲ್ಲಿಸಿ ಸಂತಾಪ ಸೂಚಕ ನಿರ್ಣಯವನ್ನು ಅಂಗೀಕರಿಸಿತು.

➢ **ಸ್ವಾಗತ:**

1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 30(1) (ix) ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ವಿಶ್ವವಿದ್ಯಾನಿಲಯದ ಡೀನರ ನೆಲೆಯಲ್ಲಿ ನಾಮನಿರ್ದೇಶನಗೊಂಡಿರುವ ಪ್ರೊ.ಈಶ್ವರ ಪಿ., ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗ ಇವರನ್ನು ಕುಲಸಚಿವರು ಸಭೆಗೆ ಸ್ವಾಗತಿಸಿದರು.
2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 30 (1) (vi)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಮಾನ್ಯ ಕುಲಪತಿಯವರಿಂದ ನಾಮನಿರ್ದೇಶನಗೊಂಡಿರುವ ಶ್ರೀ

ಕೃಷ್ಣಪ್ರಸಾದ್ ಕೆ.ಎನ್. ಪ್ರಾಂಶುಪಾಲರು, ಶ್ರೀ ರಾಮ ಪ್ರಥಮ ದರ್ಜೆ ಕಾಲೇಜು, ಕಲ್ಲಡ್ಕ ಇವರನ್ನು ಕುಲಸಚಿವರು ಸಭೆಗೆ ಸ್ವಾಗತಿಸಿದರು.

- **ಕೃತಜ್ಞತೆ:**
  1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 30(1) (ix)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ವಿಶ್ವವಿದ್ಯಾನಿಲಯದ ಡೀನರ ನೆಲೆಯಲ್ಲಿ ನಾಮನಿರ್ದೇಶನಗೊಂಡಿದ್ದಪ್ರೊ.ಮುನಿರಾಜು ವೈ, ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗ ಇವರ ಸದಸ್ಯತ್ವದ ಅವಧಿಯು ದಿನಾಂಕ 31.08.2022ರಂದು ಕೊನೆಗೊಂಡಿದ್ದು, ಶೈಕ್ಷಣಿಕ ಮಂಡಳಿ ಸದಸ್ಯತ್ವದಿಂದ ಮುಕ್ತಗೊಳಿಸಲಾಗಿರುವ ವಿಷಯವನ್ನು ಕುಲಸಚಿವರು ಸಭೆಗೆ ತಿಳಿಸಿದರು.
  2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000ದ ಪ್ರಕರಣ 30(1) (vi)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಮಾನ್ಯ ಕುಲಪತಿಯವರಿಂದ ನಾಮನಿರ್ದೇಶನಗೊಂಡಿದ್ದ ಡಾ.ಶಂಕರ್ ಭಟ್, ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಕನ್ಯಾನ ಇವರ ಸದಸ್ಯತ್ವದ ಅವಧಿಯು ದಿನಾಂಕ 31.07.2022ರಂದು ಕೊನೆಗೊಂಡಿದ್ದು, ಶೈಕ್ಷಣಿಕ ಮಂಡಳಿ ಸದಸ್ಯತ್ವದಿಂದ ಮುಕ್ತಗೊಳಿಸಲಾಗಿರುವ ವಿಷಯವನ್ನು ಕುಲಸಚಿವರು ಸಭೆಗೆ ತಿಳಿಸಿದರು.

ಇವರುಗಳೆಲ್ಲರೂ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕೆ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಸರ್ವರಿಗೂ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

I.ಈ ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:ನ್ನು ಅನುಮೋದಿಸುವ ಬಗ್ಗೆ.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಶೈ:ಮ.ವಿ.ಸ. 1:1 (2022–23)

ವಿಷಯ: DRAFT STATUTES RELATING TO APPOINTMENT AND PROMOTION OF TEACHERS AND OTHER ACADEMIC STAFF AND MEASURES FOR THE MAINTENANCE OF STANDARDS IN HIGHER EDUCATION IN THE MANGALORE UNIVERSITY AS PER THE UGC REGULATIONS, 2018ನ್ನು ಅನುಮೋದಿಸುವ ಬಗ್ಗೆ

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಶೈ.ಮ.ವಿ.ಸ.1:2 (2022–23)

ವಿಷಯ: ರಾಷ್ಟ್ರೀಯ ಶಿಕ್ಷಣ ನೀತಿ 2020ರ ಮಾದರಿ ಪ್ರಕಾರ ತಯಾರಿಸುವ ಬಿ.ಎ. ಪದವಿ ಕಾರ್ಯಕ್ರಮದ ಯಕ್ಷಗಾನ ಕೋರ್ ಕೋರ್ಸಿನ ಪಠ್ಯಕ್ರಮದ ಅನುಮೋದನೆ ಬಗ್ಗೆ.

ನಿರ್ಣಯ: ಕಲಾ ನಿಕಾಯದ ಅನುಮೋದನೆಯನ್ನು ಪಡೆದುಕೊಳ್ಳುವ ಷರತ್ತಿನ ಮೇರೆಗೆ ಯಕ್ಷಗಾನ ಕೋರ್ ಕೋರ್ಸಿನ ಪಠ್ಯಕ್ರಮವನ್ನು ಅನುಮೋದಿಸಲಾಯಿತು. ಸದರಿ ಕೋರ್ಸನ್ನು

ಬೋಧಿಸುವ ಬೋಧಕರ ಬೋಧನಾರ್ಹತೆಯನ್ನು ನಿಗದಿಪಡಿಸಿ ಮಾದರಿಪ್ರಶ್ನಾ ಪತ್ರಿಕೆಯನ್ನು ಸಲ್ಲಿಸಲು ಪಠ್ಯಕ್ರಮ ರಚನಾ ಸಮಿತಿ ಅಧ್ಯಕ್ಷರಿಗೆ ತಿಳಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ:	ಎಸಿಸಿ:ಶೈ.ಮ.ವಿ.ಸ.1:3 (2022–23)
ವಿಷಯ:	ರಾಷ್ಟ್ರೀಯ ಶಿಕ್ಷಣ ನೀತಿ 2020ರ ಮಾದರಿಯನ್ವಯ ತಯಾರಿಸಿರುವ ಬಿ.ಎಸ್ಸಿ. (ಯೋಗ ವಿಜ್ಞಾನ) ಕಾರ್ಯಕ್ರಮದ ಪಠ್ಯಕ್ರಮದ ಅನುಮೋದನೆ ಬಗ್ಗೆ.
ನಿರ್ಣಯ:	ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಅನುಮೋದನೆ ಪಡೆಯುವ ಷರತ್ತಿನ ಮೇರೆಗೆ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ:	ಎಸಿಸಿ:ಶೈ.ಮ.ವಿ.ಸ.1:4 (2022–23)
ವಿಷಯ:	ಕೌಶಲ್ಯವರ್ಧಕ ಕೋರ್ಸುಗಳಡಿ ಬರುವ ಮೌಲ್ಯ ಆಧಾರಿತ ಕೋರ್ಸು ಎನ್.ಸಿ.ಸಿ.ಯ ಪಠ್ಯಕ್ರಮದ ಅನುಮೋದನೆ ಬಗ್ಗೆ.
ನಿರ್ಣಯ:	ಸೂಚಿಸಿದ ತಿದ್ದುಪಡಿಯೊಂದಿಗೆ ಶಿಕ್ಷಣ ನಿಕಾಯದ ಅನುಮೋದನೆ ಪಡೆಯುವ ಷರತ್ತಿನ ಮೇರೆಗೆ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ:	ಸಿಡಿಸಿ:ಶೈ.ಮ.ವಿ.ಸ.1:5 (2022–23)
ವಿಷಯ:	ಶ್ರೀ ದುರ್ಗಾಪರಮೇಶ್ವರಿ ದೇವಳ ಪ್ರಥಮ ದರ್ಜೆ ಕಾಲೇಜು, ಕಟೀಲು ಎಂಬ ವಿದ್ಯಾಸಂಸ್ಥೆಗೆ ಶೈಕ್ಷಣಿಕ ವರ್ಷ 2022–23ನೇ ಸಾಲಿಗೆ ವಿಸ್ತರಣಾ ಸಂಯೋಜನೆ ಮಂಜೂರಾತಿ ಬಗ್ಗೆ.
ನಿರ್ಣಯ:	ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಮಿತಿಯು ವಿಧಿಸಿರುವ ಷರತ್ತುಗಳನ್ನು ಪೂರೈಸುವ ಷರತ್ತಿನ ಮೇರೆಗೆ ಶೈಕ್ಷಣಿಕ ವರ್ಷ 2022–23ನೇ ಸಾಲಿಗೆ ಶಿಫಾರಸ್ಸು ಮಾಡಿರುವ ವಿದ್ಯಾರ್ಥಿ ಪರಿಮಿತಿಯೊಂದಿಗೆ ಸಲ್ಲಿಸಿದ ವರದಿಯನ್ನು ಅಂಗೀಕರಿಸಿ ವಿಸ್ತರಣಾ ಸಂಯೋಜನೆ ನೀಡಬಹುದೆಂಬುದಾಗಿ ಸಿಂಡಿಕೇಟಿನ ಪರಿಗಣನೆಗೆ ಶಿಫಾರಸ್ಸು ಮಾಡಲಾಯಿತು.

ಕಾರ್ಯಸೂಚಿ ಸಂಖ್ಯೆ:	ಎಸಿಸಿ:ಶೈ.ಮ.ವಿ.ಸ.1:6 (2022–23)
ವಿಷಯ:	ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಬಹುಶಿಸ್ತೀಯ (Multi-Disciplinary) ಸ್ನಾತಕ ಕಾರ್ಯಕ್ರಮವನ್ನು ಪ್ರಾರಂಭಿಸುವ ಬಗ್ಗೆ.
ನಿರ್ಣಯ:	ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಮುಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯದಲ್ಲಿನ ಸ್ನಾತಕೋತ್ತರ ವಿಭಾಗಗಳು ಬಹುಶಿಸ್ತೀಯ ಸ್ನಾತಕ ಕಾರ್ಯಕ್ರಮವನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಬೇಕಾಗಿ ಹಾಗೂ ಈ ಬಗ್ಗೆ ರಾಷ್ಟ್ರೀಯ ಶಿಕ್ಷಣ ನೀತಿ–2020ರ ವಿಶ್ವವಿದ್ಯಾನಿಲಯದ ನೋಡಲ್ ಅಧಿಕಾರಿಯವರು ಹೆಚ್ಚಿನ ಮುತುವರ್ಜಿ ವಹಿಸಬೇಕೆಂಬುದಾಗಿಯೂ ಸಲಹೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಶೈ.ಮ.ವಿ.ಸ.1:7 (2022–23)

ವಿಷಯ: ರಾಷ್ಟ್ರೀಯ ಶಿಕ್ಷಣ ನೀತಿಯ ಮಾದರಿ ಪ್ರಕಾರ ತಯಾರಿಸಿರುವ ಬಿ.ಕಾಂ. ಪದವಿ ಕಾರ್ಯಕ್ರಮದ ಅಕೌಂಟಿಂಗ್ ಆಂಡ್ ಫೈನಾನ್ಸ್ ವೊಕೇಶನಲ್ ಕೋರ್ಸಿನ ಪಠ್ಯಕ್ರಮದ ಅನುಮೋದನೆ ಬಗ್ಗೆ.

ನಿರ್ಣಯ: ವಾಣಿಜ್ಯ ನಿಕಾಯದ ಅನುಮೋದನೆ ಪಡೆಯುವ ಷರತ್ತಿನ ಮೇರೆಗೆ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

ಇತರ ವಿಷಯಗಳು:

1. ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ವರ್ಷ ಸಪ್ಟೆಂಬರ್ 2022ರಂದು ನಡೆದ ಪದವಿ ಮಟ್ಟದ ವ್ಯವಹಾರ ಆಡಳಿತ ಕಾರ್ಯಕ್ರಮದ ದ್ವಿತೀಯ ಸೆಮಿಸ್ಟರಿನ ಕನ್ನಡ ಭಾಷಾ ಪತ್ರಿಕೆಯ ಪರೀಕ್ಷೆಯ ಪ್ರಶ್ನಾ ಪತ್ರಿಕೆಯಲ್ಲಿ ಉಂಟಾದ ಲೋಪದೋಷಗಳ ಬಗ್ಗೆ ಪ್ರಸ್ತಾಪವಾಗಿರುವ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಯವರು ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದು, ಈ ಬಗ್ಗೆ ಸೂಕ್ತ ವಿವರಣೆಯನ್ನು ಕುಲಸಚಿವರು (ಪರೀಕ್ಷಾಂಗ) ಇವರಿಂದ ಪಡೆದು ಮುಂಬರುವ ಸಿಂಡಿಕೇಟು ಸಭೆಗೆ ಮಂಡಿಸಿ ನಿರ್ಣಯ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.
2. ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಗೊಳಪಟ್ಟ ಡಾ.ಜಿ.ಶಂಕರ್ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಅಜ್ಜರಕಾಡು ಇಲ್ಲಿನ ಪ್ರಾಂಶುಪಾಲರು ಪದವಿ ಮಟ್ಟದ ವಾಣಿಜ್ಯ ಕಾರ್ಯಕ್ರಮದ 98 ವಿದ್ಯಾರ್ಥಿಗಳ ಅಂಕಗಳಿಗೆ ಸಂಬಂಧಿಸಿ ಉಂಟಾಗಿರುವ ಗೊಂದಲಗಳ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದ್ದು, ಸದರಿ ವಿಷಯದ ಬಗ್ಗೆ ಸೂಕ್ತ ಕ್ರಮಕೈಗೊಳ್ಳಬೇಕಾಗಿ ಕುಲಸಚಿವರು (ಪರೀಕ್ಷಾಂಗ) ಇವರಿಗೆ ತಿಳಿಸಲಾಯಿತು.

ಮಾನ್ಯ ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–
ಕುಲಸಚಿವರು.

ಸಹಿ/–
ಕುಲಪತಿಗಳು.